Sahitya School

Shidlaghatta Road, Near Shirusti Hospital, H Cross.

# ನಿಮ್ಮ ಸಮಯವನ್ನು ಮೊದಲು ನಿಮ್ಮ ಮಕ್ಕಳಿಗೆ ನೀಡಿ. ನಂತರ ಅವರು ನಿಮಗಾಗಿ ಸಮಯವನ್ನು ಮಾಡಿಕೊಳ್ಳುತ್ತಾರೆ.

- **ಗುಣಮಟ್ಟದ ಸಮಯವನ್ನು ಒಟ್ಟಿಗೆ ಕಳೆಯಿರಿ.** ಬೆಳಗಿನ ಹೊತ್ತು ನಿಮ್ಮ ಮಕ್ಕಳಿಗಿಂತ ಹತ್ತು ನಿಮಿಷ ಮೊದಲು ನೀವು ಎದ್ದು ಬೆಳಗಿನ ತಿಂಡಿ ಅವರೊಂದಿಗೆ ಸೇವಿಸಿ. ರಾತ್ರಿ ಊಟದ ನಂತರ ಸ್ವಲ್ಪ ದೂರ ಅವರೊಂದಿಗೆ ವಾಕ್ ಮಾಡಿ. ಇದಕ್ಕಿಂತ ಅಮೂಲ್ಯವಾದದ್ದೇನೂ ಮಕ್ಕಳು ನಿರೀಕ್ಷಿಸುವುದಿಲ್ಲ.
- **ಒಟ್ಟಿಗೆ ಸಮಯವನ್ನು ನಿಗದಿಪಡಿಸಿ.** ವಾರಕ್ಕೊಮ್ಮೆ ನಿಮ್ಮ ಮಕ್ಕಳೊಂದಿಗೆ ಯಾವುದಾದರೊಂದು ವಿಶೇಷವನ್ನು ಆಚರಿಸಿ. ಆ ದಿನವಿಡಿ ಹೇಗೆ ಕಳೆಯಬೇಕು ಎಂಬುದನ್ನು ನಿರ್ಧರಿಸಲು ಅವರಿಗೇ ಹೇಳಿ.
- **ಸಂಬಂಧ ಬೆಳೆಸುವ ಮಾರ್ಗಗಳನ್ನು ನೋಡಿ.** ಕೆಲವು ವಿಶೇಷವಾದ ಸಂಗತಿಗಳನ್ನು ಆಶ್ಚರ್ಯವಾಗುವ ರೀತಿಯಲ್ಲಿ ತಿಳಿಸಿ. ಉದಾಹರಣೆಗೆ ಕೆಲವು ಮುಖ್ಯವಾದ ಸಂಗತಿಗಳನ್ನು ಒಂದು ಚೀಟಿಯಲ್ಲಿ ಬರೆದು ಅವರಿಗೆ ತಿಳಿಯದಂತೆ ಅವರ ಊಟದ ಡಬ್ಬಿಯಲ್ಲಿಡುವುದು ಇತ್ಯಾದಿ.
- **ನಿಮ್ಮ ಮಗುವಿಗೆ ನೀವು ಬೇಕೆನಿಸಿದಾಗ ನೀವು ಅಲ್ಲಿರಬೇಕು.** ನಿಮ್ಮೊಂದಿಗೆ ಮಾತನಾಡಲು ಅಥವಾ ಆಟವಾಡಲು ಬಯಸಿದಾಗ ನೀವು ಅವರಿಗೆ ಸಿಗುವಂತಿರಬೇಕು.
- **ಮಗುವಿನೊಂದಿಗೆ ಕೆಲಸಗಳನ್ನು ಮಾಡಿರಿ.** ಅಂಗಡಿಯಲ್ಲಿ ಏನಾದರೂ ಕೊಳ್ಳಲು ಹೋದಾಗ, ಸಿನಿಮಾ ನಾಟಕಗಳನ್ನು ನೋಡಲು ಹೋಗುವಾಗ, ಯಾರದಾದರೂ ಮನೆಯಲ್ಲಿರುವ ಹುಟ್ಟುಹಬ್ಬ ಕಾರ್ಯಕ್ರಮಗಳಲ್ಲಿ ನೀವೂ ನಿಮ್ಮ ಮಗುವಿನೊಂದಿಗೆ ಭಾಗವಹಿಸಿ. ಇದರಿಂದ ನಿಮ್ಮ ಮಗುವಿನ ಬಗ್ಗೆ ಎಷ್ಟೋ ಹೊಸ ವಿಷಯಗಳು ಅರ್ಥವಾಗುತ್ತದೆ. ಅವರ ಸ್ನೇಹಿತರ ಬಗ್ಗೆಯೂ ತಿಳಿಯುತ್ತದೆ.
- **ನೀವು ಕೆಲಸದಲ್ಲಿರುವ ಪೋಷಕರಾಗಿದ್ದರೂ ಚಿಂತಿಸಬೇಕಿಲ್ಲ.** ಮಕ್ಕಳು ಬಯಸುವ ತಿಂಡಿ ಮಾಡಿಕೊಡುವುದು, ಅವರೊಂದಿಗೆ ಅಂಗಡಿಗೆ ಹೋಗಿಬರುವುದು, ಆಟದ ಮೈದಾನಕ್ಕೆ ಕರೆದುಕೊಂಡು ಹೋಗುವಂತಹ ಅನೇಕ ಸಣ್ಣ ಸಣ್ಣ ಸಂಗತಿಗಳನ್ನೇ ಅವರು ಹೆಚ್ಚು ಇಷ್ಟಪಡುತ್ತಾರೆ.

Where Fun Meets Learning